೬) ಹೊಸ ಕಾರ್ಖಾನೆಗಳಿಗೆ ಅಥವಾ ಹಳೆ ಉದ್ದಿಮೆಗಳ ಅಭಿವೃದ್ಧಿಗೆ ಸಹಾಯಧನ ನೀಡಬೇಕು. ಈ ಉದ್ದಿಮೆ ಉಳಿಸಬೇಕು. ಕೂಲಿಕಾರರು ನಿರ್ಗತಿಕರಾಗುವುದನ್ನು ತಪ್ಪಿಸಬೇಕೆಂದೂ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಬಹಳ ಚೆನ್ನಾಗಿ ಬರೆದಿದ್ದಾರೆ. ಸಂಬಂಧಪಟ್ಟ ಮಂತ್ರಿಗಳಿಂದ ಉತ್ತರ ತರಿಸಿಕೊಡುತ್ತೇನೆ.

ಶ್ರೀ ಬಿ. ಎಸ್. ಶಿವನಂಜಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರ ಕೊಡುವಾಗ ಸರಿಯಾಗಿ ಉತ್ತರವನ್ನೂ ಕೊಡುತ್ತಿಲ್ಲ. ಒಂದು ರೀತಿ ವ್ಯಂಗವಾಗಿ ಮಾತನಾಡುತ್ತಾರೆ.

ಅಧ್ಯಕ್ಷರು.—ಇಲ್ಲ ಆ ರೀತಿಯಿಲ್ಲ. ಮಾನ್ಯ ಜಿ. ಎಸ್. ಆಚಾರ್‌ರವರು ಸಾಹಿತಿಗಳು. ಅದಕ್ಕೆ ಆ ರೀತಿ ಹೇಳಿದ್ದಾರೆ.

೧೩. ಪಾಣೆವಿಲಾಸ್ ಸಾಗರದ ಅಚ್ಚುಕಟ್ಟಿನ ಪ್ರದೇಶದ ರೈತರಿಗೆ ವಿಧಿಸಿರುವ ಕಂದಾಯದಿಂದ ತೊಂದರೆಯಾಗಿರುವುದು.

ಅಧ್ಯಕ್ಷರು.—ಮಾನ್ಯ ವಿನಯಕುಮಾರ್ ಸೊರಕೆ ಸದಸ್ಯರು ಗೈರುಹಾಜರಿ ಮಾನ್ಯ ಆರ್. ರಾಮಯ್ಯನವರು ತಾವು ಕೇಳಬಹುದು.

ಶ್ರೀ ಆರ್. ರಾಮಯ್ಯ.—ಮಾನ್ಯ ಅಧ್ಯಕ್ಷರೇ ನನ್ನ ಹಿಂಬಳಿನೇ ಏಯಮದ ಮೇರೆಗೆ ಕೇಳಿರುವ ಪ್ರಶ್ನೆಗೆ ಉತ್ತರ ದೊರೆಯುತ್ತದೆಯೋ ಇಲ್ಲವೋ ಗೊತ್ತಿಲ್ಲ ಏಕೆಂದರೆ ಖಾತೆಗೆ ಸಂಬಂಧಪಟ್ಟ ಮಂತ್ರಿಗಳು ಈಗಾಗಲೇ ರಾಜೀನಾಮೆಯನ್ನು ಕೊಟ್ಟಿದ್ದಾರೆ. ಆದರೂ ಅನಿವಾರ್ಯವಾಗಿ ಓದುತ್ತೇನೆ.

ಮಾನ್ಯ ಅಧ್ಯಕ್ಷರೇ ಹಿರಿಯೂರು ತಾಲ್ಲೂಕಿನ ಪಾಣಿ ವಿಲಾಸ ಸಾಗರವನ್ನು ಮೇಜರ್ ಕೆರೆಯೆಂದು ಪರಿಗಣಿಸುವುದು ಹಾಸ್ಯಾಸ್ಪದ ಕಾರಣ ಇಲ್ಲಿ ಬರುವ ಅಚ್ಚುಕಟ್ಟು ಪ್ರದೇಶವನ್ನು ಗುರುತಿಸಿ ಘೋಷಿಸದೆ ಇರುವುದರಿಂದಲೂ ಹಾಗೂ ಇದಕ್ಕೆ ರೆಗ್ಯುಲರ್ ಸೋರ್ಸ್ ಆಫ್ ವಾಟರ್ ಇಲ್ಲದೆ ಇರುವ ಕಾರಣ ಮೇಜರ್ ಎಂದು ಪರಿಗಣಿಸುವುದಕ್ಕೆ ಅವಕಾಶ ಇರುವುದಿಲ್ಲ. ಇದರ ಜೊತೆಗೆ ಗುಡಿ ಪಹಣಿ ಮತ್ತು ಹಜಮಾಯಿಷಿ ಸ್ಥಳ ಪರಿಶೀಲನೆ ಮಾಡದೆ ಬರೆದಿರುವ ಪಹಣಿಯಿಂದಾಗಿ ನೀರು ಕಂದಾಯಕ್ಕೆ ಜಮೀನನ್ನು ಮಾರಿದರೂ ತೀರುವಳಿ ಮಾಡದಷ್ಟು ಕಗ್ಗಂಟಾಗಿದೆ. ಇದು ಇಲಾಖೆಯವರ ಉಪೇಕ್ಷೆ ಮತ್ತು ಪಹಣಿ ಬರೆದಿರುವವರ ಬೇಜವಾಬ್ದಾರಿ. ಈ ಎರಡರಿಂದಲೂ ರೈತರಿಗೆ ಬಹಳ ತೊಂದರೆಯಾಗಿದೆ. ಆದ ಪ್ರಯುಕ್ತ (೧) ಇದು ೧೯೮೫ರಲ್ಲಿ ನಿರ್ಮಾಣವಾಗಿರುವುದರಿಂದ ಸರ್ಕಾರದ ಬೊಕ್ಕಸದಿಂದ ಹಣ ಖರ್ಚಾಗದೆ ಇರುವುದರಿಂದ ಇದನ್ನು ಜನರಿಗೆ ಪುಕ್ಕಟೆಯಾಗಿ ಅರ್ಪಣೆ ಮಾಡಿದ ಅಂದಿನ ರಾಜರ ಕೊಡಿಗೆಯಾದ್ದರಿಂದ ಇದರಮೇಲೆ ನೀರು ಕಂದಾಯವನ್ನು ಹೇರದಿರಲು (೨) ಈ ಕೆರೆಯನ್ನು ಮಿಡಿಯಮ್ ವಿತ್ ಇರಿಗ್ಯುಲರ್ ರಿಸೋರ್ಸಸ್ ಆಫ್ ವಾಟರ್ ಎಂದು ಪರಿಗಣಿಸಿ ನೀರು ಕಂದಾಯವನ್ನು ವಿಧಿಸಲು ಹಾಗೂ ತಾಲಿ ಮೇಜರ್ ಕೆರೆಯೆಂದು ಪರಿಗಣಿಸಿರುವ ಹುಕುಂನ್ನು ಹಿಂದಕ್ಕೆ ಪಡೆಯಲು (೩) ಹಾಗೂ ಇಲಾಖೆಯವರು ರೈತರಿಗೆ ಬಿಟ್ಟುಕೊಟ್ಟ ನೀರಿನ ಆಧಾರದಮೇಲೆ ಮತ್ತು ಗುಡಿ ಪಹಣಿ ಬರೆಯುವ ವಿಧಾನವನ್ನು ಬದಲಿಸುವ ನೀರ ಕ್ರಮವನ್ನು ಸರ್ಕಾರ ಕೈಕೊಂಡು ಈಗ ವಿಧಿಸಿರುವ ನೀರಿನ ಕಂದಾಯವನ್ನು ಮೇಲೆ ತಿಳಿಸಿರುವ ಸೂಕ್ತ ಆಧಾರದನಂತರವೇ ಎತ್ತಲು ಆದೇಶಿಸಲು ಕೋರುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಸದಸ್ಯರಿಗೆ ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ತರಿಸಿ ಕೊಡುತ್ತೇನೆ.

ಅಧ್ಯಕ್ಷರು.—ಶ್ರೀ ಶ್ರೀರಂಗದೇವರಾಯಲು ಸದಸ್ಯರು ಗೈರು ಹಾಜರಿ